**ಪ್ರದಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ 366/2013 ಸಿ.ಡಬ್ಲ್ಯೂ –6 ಪಿ.ಡಬ್ಲ್ಯೂ -8

| | | |
|---|---|---|
| ಹೆಸರು | ಃ | ಡಾ. ನಾಗೇಂದ್ರ |
| ತಂದೆಃ ಗಂಡ | ಃ | ಫಕಿರಪ್ಪ |
| ವಯಸ್ಸು | ಃ | 49 ವರ್ಷ |
| ಉದ್ಯೋಗ | : | ಸರಕಾರದ ಅಪರ ಕಾರ್ಯದರ್ಶಿಗಳು, ನಗರಾಭಿವೃದ್ದಿ ಇಲಾಖೆ, |
| ವಾಸಸ್ಥಳ | ಃ | ಬೆಂಗಳೂರು |

ದಿನಾಂಕಃ28.02.2025

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ**

ಆರೋಪಿತರ ಪರಿಚಯ ಇರುತ್ತದೆ. ಚಾಸಾ-2 ರಿಂದ 5, 7 ರವರ ಪರಿಚಯ ಇರುತ್ತದೆ.

ಆಳಂದ ತಾಲೂಕಿನ ಖಜೂರಿ ಹೋಬಳಿಯಲ್ಲಿ ತ್ರಿವಿಧದ ಮಾಸಾಶನಗಳನ್ನು ಕಾನೂನು ಬಾಹೀರವಾಗಿ ಮಂಜೂರು ಮಾಡಿರು ಕುರಿತು ದೂರು ಸ್ವೀಕೃತವಾಗಿದ್ದರಿಂದ ಮಾನ್ಯ ಪ್ರಾದೇಶಿಕ ಆಯುಕ್ತರು, ಕಲಬುರಗಿ ಮತ್ತು ಜಿಲ್ಲಾಧಿಕಾರಿಗಳು ಕಲಬುರಗಿ ಇವರ ನಿರ್ದೇಶನದ ಮೇರೆಗೆ ಭೌತಿಕ ಪರಿಶೀಲನೆ ಕೈಗೊಂಡಾಗ ಮತ್ತು ಈ ಕುರಿತು ಉಪಖಜಾನೆ ಅಧಿಕಾರಿಗಳು ಆಳಂದ ಇವರಿಂದ ಮಾಸಾಶನ ಪಡೆದವರ ಬಗ್ಗೆ ಮಾಹಿತಿ ಪಡೆಯಲಾಗಿ ಇದರಲ್ಲಿ ಬಹಳಷ್ಟು ಜನರು ಅನರ್ಹರು ಪತ್ತೆ ಆಗಿರುತ್ತಾರೆ. ಈ ಕುರಿತು ನಾವು ಅದನ್ನು ಗಂಭೀರವಾಗಿ ತೆಗೆದುಕೊಂಡು ನಮ್ಮ ಆಳಂದ ತಾಲೂಕಿನ ತುಂಬಾ ಪರಿಶೀಲನೆ ಮಾಡಬೇಕೆಂದು ನಿರ್ಧಾರ ಮಾಡಿ ನಾಲ್ಕು ತಂಡಗಳನ್ನಾಗಿ ದಿ.23.08.2010 ರಂದು ರಚನೆ ಮಾಡಿರುತ್ತೇವೆ. ಆ ಪ್ರಕಾರ ಸದರಿ ನಾಲ್ಕು ತಂಡಗಳು ಪರಿಶೋಧನೆ ಮಾಡಿರುತ್ತಾರೆ. ಅದರಲ್ಲಿ ಖಜೂರಿ ಉಪ ತಹಸೀಲ್ದಾರ (ಆರೋಪಿ ನಂ.೨) ಕಾನೂನುಬಾಹೀರವಾಗಿ ತ್ರಿವಿಧದ ಮಾಸಾಶನವನ್ನು ಮಂಜೂರು ಮಾಡಿದ್ದು ಕಂಡು ಬಂದಿದ್ದರಿಂದ ಇದೇ ನ್ಯಾಯಾಲಯದಲ್ಲಿ ಅವರ ವಿರುದ್ದ ಬೇರೆ ಪ್ರಕರಣಗಳನ್ನು ದಾಖಲಿಸಿರುತ್ತೇನೆ. ಅದೇ ರೀತಿಯಾಗಿ ಚಾಸಾ-೧ ರವರ ತಂಡದವರು ಪರಿಶೀಲನೆ ಮಾಡಿದಾಗ ಚಿತಲಿ ಗ್ರಾಮದಲ್ಲಿ ಚಂದುರಾವ ಕೋರೆ ಅನ್ನುವವರಿಗೆ ಸಾಕಷ್ಟು ಜಮೀನುಗಳು ಇದ್ದವು, ಅವರು ಅನರ್ಹರಿದ್ದರೂ, ಆದರೂ ಅವರಿಗೆ ಆರೋಪಿ ನಂ.೨ ರವರು ಮಂಜೂರು ಮಾಡಿರುತ್ತಾರೆ. ಸದರಿ ಚಂದುರಾವ ಕೋರೆ ರವರೇ ಆರೋಪಿ ನಂ.೧ ಇರುತ್ತಾರೆ. ಇದು ಕಂಡು ಬಂದ ಕಾರಣ

ಚಾಸಾ-೧ ರವರು ಆರೋಪಿ ವಿರುದ್ಧ ಫಿರ್ಯಾದಿಯನ್ನು ಸಲ್ಲಿಸಿರುತ್ತಾರೆ. ಈ ರೀತಿಯಾಗಿ ನಾನು ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀ ಸವಾಲು ಆರೋಪಿ ನಂ.೧ರವರ ಪರ ಶ್ರೀ ಬಿ.ಎ.ಡಿ. ವಕೀಲರಿಂದ**

ಈ ಪ್ರಕರಣದಲ್ಲಿ ಪೋಲಿಸರು ನನ್ನ ಹೇಳಿಕೆಯನ್ನು ಪಡೆದಿರುತ್ತಾರೆ. ಆರೋಪಿ ನಂ.೧ ರವರಿಗೆ ಮಾಸಾಶನವನ್ನು ಮಂಜೂರು ಮಾಡುವ ಸಮಯದಲ್ಲಿ ಅವರಿಗೆ ಎಷ್ಟು ಎಕರೆ ಜಮೀನುಗಳು ಇದ್ದವು ಎಂದರೆ ಸಾಕ್ಷಿ ನನಗೆ ನೆನಪಿಲ್ಲ, ಆದರೆ ಅವರ ಒಟ್ಟು ಕುಟುಂಬದ ಆಸ್ತಿ 16 ಎಕರೆ ಇತ್ತು ಎಂದು ನುಡಿಯುತ್ತಾರೆ. ಆ ಒಟ್ಟು ಕುಟುಂಬದ ಆಸ್ತಿಯ ಜಮೀನು ಸ.ನಂ. ಅವರ ಕುಟುಂಬದ ಒಟ್ಟು ಸದಸ್ಯರ ಸಂಖ್ಯೆ ಎಷ್ಟು ಎಂದು ನಿಮಗೆ ಗೊತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಆರೋಪಿ ನಂ.೧ ರವರು ತಮ್ಮ ಮಕ್ಕಳ ಹೆಸರಿನಲ್ಲಿ ಜಮೀನುಗಳನ್ನು ವರ್ಗಾವಣೆ ಮಾಡಿರುತ್ತಾರೆ, ಸದರಿ ವರ್ಗಾವಣೆಯನ್ನು ರದ್ದುಪಡಿಸಿದ್ದು ನಿಮಗೇನಾದರೂ ಗೊತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಈ ಕುರಿತು ನಾನು ಯಾವುದೇ ಪರಿಶೀಲನೆ ಮಾಡಿರುವುದಿಲ್ಲ. ನಾನು ಯಾವುದೇ ದಾಖಲಾತಿಗಳನ್ನು ಪರಿಶೀಲಿಸದೇ ಚಾಸಾ-೧ ರವರು ಫಿರ್ಯಾದಿ ಕೊಟ್ಟ ಕಾರಣಕ್ಕೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಆರೋಪಿ ಸರಕಾರಕ್ಕೆ ಯಾವುದೇ ರೀತಿಯಾದ ಸುಳ್ಳು ಮಾಹಿತಿ ನೀಡಿ ಮೋಸ ಮಾಡಿರುವುದಿಲ್ಲ ಎಂದರೆ ಸರಿ ಅಲ್ಲ.

**ಪಾಟೀ ಸವಾಲು ಆರೋಪಿ ನಂ.೨ರವರ ಪರ ಶ್ರೀ ಎಸ್.ಎ.ಕೆ. ವಕೀಲರಿಂದ**

ನಿರ್ದಿಷ್ಟವಾಗಿ ಇಂತಿಂತ ವ್ಯಕ್ತಿಗಳಿಗೆ ತ್ರಿವಿಧ ಮಾಸಾಶಾನವನ್ನು ಮಂಜೂರು ಮಾಡಬೇಕೆಂದು ಸರಕಾರ ನಡುವಳಿಗಳನ್ನು ಮಾಡಿರುತ್ತದೆ ಎಂಧರೆ ಸರಿ. ಆರೋಪಿ ನಂ.೨ ರವರು ಸರಕಾರದ ಯಾವ ಆದೇಶವನ್ನು ಉಲ್ಲಂಘನೆ ಮಾಡಿ ಅಪರಾಧ ಎಸಗಿದ್ದಾರೆ ಎಂದು ನಿಮಗೆ ಹೇಳಲು ಬರುತ್ತದೆಯಾ ಎಂದರೆ ಸಾಕ್ಷಿ ಬರುತ್ತದೆ, ಆರೋಪಿ ನಂ.೧ ಹೆಚ್ಚಿಗೆ ಜಮೀನನ್ನು ಹೊಂದಿದ್ದನು, ಅವನು ಮಾಸಾಶನ ಪಡೆಯಲು ಅನರ್ಹನಿದ್ದನು, ಆದರೂ ಆರೋಪಿ ನಂ.೨ ರವರು ಮಂಜೂರಾತಿ ಮಾಡಿರುತ್ತಾರೆ. ಆರೋಪಿ ನಂ.೧ ಎಷ್ಟು ಜಮೀನುಗಳನ್ನು ಹೊಂದಿದ್ದನು, ಅವು ಯಾವ ಯಾವ ಜಮೀನುಗಳು ಮತ್ತು ಎಷ್ಟು ಕ್ಷೇತ್ರ ಎಂದು ನಿರ್ದಿಷ್ಟವಾಗಿ ದಾಖಲಾತಿಗಳನ್ನು ನೋಡಿದ್ದಿರಾ ಎಂಧರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಆರೋಪಿ ನಂ.೧ ಯಾವ ಅರ್ಜಿಯನ್ನು ಸಲ್ಲಿಸಿದ್ದನು, ಯಾವಾಗ ಸಲ್ಲಿಸಿದ್ದನು, ಅವನು

ಹೇಗೆ ಸಲ್ಲಿಸಿದ್ದನು, ಅರ್ಜಿಯನ್ನು ಏನೇನು ಮಾಹಿತಿ ನೀಡಿದ್ದನು ಎಂದು ನೀವೇನಾದರೂ ಪರಿಶೀಲನೆ ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ, ಸುಮಾರು 2000 ಪ್ರಕರಣಗಳು ಇದ್ದ ಕಾರಣ ನಾಲ್ಕು ತಂಡಗಳನ್ನಾಗಿ ನೇಮಿಸಿದ್ದೇನೆ ಎಂದು ನುಡಿಯುತ್ತಾರೆ. ನಾಲ್ಕು ತಂಡಗಳನ್ನು ನಾನೇ ರಚನೆ ಮಾಡಿ ನಿರ್ದೇಶನಗಳನ್ನು ನೀಡಿದ್ದೇನೆ. ಅರ್ಜಿಗಳನ್ನು ಪರಿಶೀಲನೆ ಮಾಡಲು ನಾನು ನಿರ್ದೇಶನ ಕೊಟ್ಟಿರುವುದಿಲ್ಲ, ಆದೇಶಕ್ಕೆ ಅನುಗುಣವಾಗಿ ಪರಿಶೀಲನೆ ಮಾಡಿ ಎಂಧು ನಿರ್ದೇಶನ ನೀಡಿರುತ್ತೇನೆ.

ಗ್ರಾಮ ಲೆಕ್ಕಿಗ ಮತ್ತು ಕಂದಾಯ ನಿರೀಕ್ಷಕರ ವರದಿಯ ಆಧಾರದ ಮೇಲೆ ಉಪ ತಹಸೀಲ್ದಾರವರು ಮಾಸಾಶನವನ್ನು ಮಂಜೂರು ಮಾಡಬೇಕೆಂದು ನಿಯಮ ಇರುತ್ತದೆ ಎಂದರೆ ಸರಿ. ಸದರಿ ಆರೊಪಿ ನಂ.೨ ರವರು ಆದೇಶ ಮಾಡಿರುವ ಕಡತದಲ್ಲಿ ಕಂದಾಯ ನಿರೀಕ್ಷಕರು ಮತ್ತು ಗ್ರಾಮ ಲೆಕ್ಕಿಗರ ವರದಿ ಇದೆಯಾ ಅಥವಾ ಇಲ್ಲ ಎಂದು ನೀವೇನಾದರೂ ಪರಿಶೀಲನೆ ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂಧು ನುಡಿಯುತ್ತಾರೆ. ಗ್ರಾಮ ಲೆಕ್ಕಿಗ ಮತ್ತು ಕಂದಾಯ ನಿರೀಕ್ಷಕರ ವರದಿಯ ಮೇಲೆ ಆರೋಪಿ ನಂ.೨ ರವರು ಮಾಸಾಶನ ಮಂಜೂರು ಮಾಡಿದರೆ ಅವರದು ಯಾವುದೇ ತಪ್ಪು ಇರುವುದಿಲ್ಲ ಎಂದರೆ ಸರಿ. ಈ ಪ್ರಕರಣದಲ್ಲಿ ಗ್ರಾಮ ಲೆಕ್ಕಿಗ ಮತ್ತು ಕಂದಾಯ ನಿರೀಕ್ಷಕರ ವರದಿ ಇದೆಯಾ ಅಥವಾ ಇಲ್ಲ ಎಂದು ನೀವು ಖುದ್ದಾಗಿ ಪರಿಶೀಲನೆ ಮಾಡಿದ್ದೀರಾ ಅಥವಾ ತಂಡದವರಿಗೆ ನಿರ್ದೇಶನವನ್ನು ನೀಡಿದ್ದೀರಾ ಎಂದರೆ ಸಾಕ್ಷಿ ತಂಡದವರಿಗೆ ನಿರ್ದೇಶನ ನೀಡಿರುತ್ತೇನೆ, ನಾನು ಖುದ್ದಾಗಿ ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು ನಿಮ್ಮ ಹೇಳಿಕೆಯಲ್ಲಾಗಲಿ ಅಥವಾ ಪೋಲಿಸರಿಗೆ ಕೊಟ್ಟ ದಾಖಲಾತಿಗಳಲ್ಲಾಗಲಿ ನಾಲ್ಕು ತಂಡದವರು ನಮಗೆ ವರದಿ ಸಲ್ಲಿಸಿದ ಆಧಾರದ ಮೇಲೆ ಆರೋಪಿ ನಂ.೨ ಕಂದಾಯ ನಿರೀಕ್ಷಕರು ಮತ್ತು ಗ್ರಾಮ ಲೆಕ್ಕಿಗರ ವರದಿಯನ್ನು ಪಡೆಯದೇ ಆದೇಶ ಮಾಡಿದ್ದಾನೆ ಎಂದು ಯಾವುದೇ ರೀತಿಯಾದ ಉಲ್ಲೇಖ ಇಲ್ಲ ಎಂದರೆ ಸಾಕ್ಷಿಯು ನಿರ್ದಿಷ್ಟವಾದ ಪ್ರಕರಣದಲ್ಲಿ ಹೇಳಿರುವುದಿಲ್ಲ ಸಾಮಾನ್ಯವಾಗಿ ಹೇಳಿದ್ದೇನೆ ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ ನೀವೇನಾದರೂ ಆರೋಪಿ ನಂ.೨ ಕಂದಾಯ ನಿರೀಕ್ಷಕರು ಮತ್ತು ಗ್ರಾಮ ಲೆಕ್ಕಿಗರ ವರದಿಯನ್ನು ಪಡೆಯದೇ ಆದೇಶ ಮಾಡಿರುತ್ತಾರೆ ಎಂದು ನೀವೇನಾದರೂ ಹೇಳಿಕೆ ನೀಡಿದ್ದೀರಾ ಎಂಧರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಪಿ-೨೪ರಲ್ಲಿ ಉದ್ದೇಶಿತ ಸಾಮಾಜಿಕ ಭದ್ರತಾ ವೇತನ ಫಲಾನುಭವಿಗಳ ಆದಾಯವನ್ನು ಲೆಕ್ಕ ಹಾಕುವಾಗ ಫಲಾನುಭವಿಯು ಆತ-ಆಕೆ ಅವರ ಆದಾಯವನ್ನು ಘೋಷಿಸಿದಲ್ಲಿ ವಯಸ್ಕ ಮಕ್ಕಳ ಆದಾಯವನ್ನು ಗಣನೆಗೆ ತೆಗೆದುಕೊಳ್ಳಬಾರದೆಂದು ಸರಕಾರದವರು ನಡುವಳಿಗಳನ್ನು ಪಾಸು ಮಾಡಿರುತ್ತಾರೆ

ಎಂದರೆ ಸರಿ. ಸರಕಾರದ ಸುತ್ತೋಲೆ ಪ್ರಕಾರ ಪರಿಶೀಲನೆ ಮಾಡಿ ಎಂದು ನಾನು ತಂಡದವರಿಗೆ ನಿರ್ದೇಶನ ನೀಡಿರುತ್ತೇನೆ. ಅನರ್ಹ ಫಲಾನುಭವಿಗಳ ದಾಖಲಾತಿಗಳನ್ನು ಪಡೆದುಕೊಳ್ಳಿ ಎಂದು ನಿರ್ದೇಶನ ನೀಡಿದ್ದೀರಾ ಎಂದರೆ ಸಾಕ್ಷಿಯು ಇಲ್ಲ, ಸರಕಾರದ ಸುತ್ತೋಲೆ ಪ್ರಕಾರ ಆದೇಶ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ತಂಡದ ಮುಖ್ಯಸ್ಥರು ಪರಿಶೀಲನೆ ಮಾಡಿ ಎಲ್ಲಾ ದಾಖಲಾತಿಗಳನ್ನು ನಿಮಗೆ ನೀಡಿದ್ದರಾ ಎಂದರೆ ಸಾಕ್ಷಿ ನೀಡಿರುತ್ತಾರೆ ಎಂಧು ನುಡಿಯುತ್ತಾರೆ. ಸದರಿ ತಂಡದವರು ವರದಿಯನ್ನು ಸಲ್ಲಿಸಿದ ನಂತರ ಆರೋಪಿ ನಂ.೧ ಅರ್ಹನೋ ಅಥವಾ ಅನರ್ಹನೋ ಎಂದು ಖುದ್ದಾಗಿ ಪರಿಶೀಲನೆ ಮಾಡಿದ್ದೀರಾ ಎಂಧರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸರಕಾರದ ನಡವಳಿ ಪ್ರಕಾರ ವಯಸ್ಕರ ಮಕ್ಕಳ ಆದಾಯವನ್ನು ಗಣನೆಗೆ ತೆಗೆದುಕೊಳ್ಳಬಾರದೆಂದು ಇದೆ, ಆದರೆ ನೀವು ನಿಮ್ಮ ಹೇಳಿಕೆಯಲ್ಲಿ ಆರೋಪಿ ನಂ.೧ ಮತ್ತು ಅವರ ಮಕ್ಕಳ ಆಸ್ತಿಯನ್ನು ಸೇರಿಸಿಕೊಂಡು ಒಟ್ಟು 16 ಎಕರೆ ಜಮೀನು ಹೊಂದಿದ್ದಾರೆ ಎಂದು ಹೇಳಿರುತ್ತೀರ, ಹಾಗಿದ್ದರೆ ನೀವು ಸರಕಾರದ ಆದೇಶವನ್ನು ಉಲ್ಲಂಘನೆ ಮಾಡಿದಂತೆ ಆಗುತ್ತದೆ ಎಂದರೆ ಸರಿ ಅಲ್ಲ. ವಯಸ್ಕರ ಮಕ್ಕಳ ಆದಾಯವನ್ನು ಗಣನೆಗೆ ತೆಗೆದುಕೊಳ್ಳಬಾರದೆಂದು ಸರಕಾರದ ನಡವಳಿ ಇದೆ ಹಾಗಿದ್ದರೆ ಯಾವ ಆಧಾರದ ಮೇಲೆ ಮಕ್ಕಳ ಆದಾಯವನ್ನು ಗಣನೆಗೆ ತೆಗೆದುಕೊಂಡಿರಿ ಎಂದರೆ ಸಾಕ್ಷಿ ಚಾಸಾ-೧ ರವರಿಗೆ ಗೊತ್ತು ಎಂದು ನುಡಿಯುತ್ತಾರೆ. ನಾನು ನನ್ನ ಹೇಳಿಕೆಯಲ್ಲಿ ಆರೋಪಿ ನಂ.೧ ರವರು ಚಿತಲಿ ಸೀಮೆಯಲ್ಲಿ ತನ್ನ ಹೆಸರಿಗೆ ಮತ್ತು ಮಕ್ಕಳ ಹೆಸರಿಗೆ ಸ.ನಂ.89/1 ರಲ್ಲಿ 4 ಎ-05 ಗುಂಟೆ 89/2 ರಲ್ಲಿ 5 ಎಕರೆ, 89/3 ರಲ್ಲಿ 5 ಎಕರೆ ಹಾಗೂ ಸ.ನಂ. 17/7 ರಲ್ಲಿ 1 ಎ-36 ಗುಂಟೆ, ಒಟ್ಟು 16 ಎಕರೆ ಜಮೀನನ್ನು ಹೊಂದಿರುತ್ತಾನೆ ಎಂದು ಹೇಳಿಕೆ ನೀಡಿರುತ್ತೀರಾ, ಇದು ನಿಜಾನಾ ಎಂದರೆ ಸಾಕ್ಷಿ ವರದಿಯ ಆಧಾರದ ಮೇಲೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಎಲ್ಲಾ ವರದಿಗಳಲ್ಲಿ ನಿಮ್ಮ ತಂಡದವರು ಅವರ ಒಟ್ಟು ಕುಟುಂಬದ ಆಸ್ತಿಯನ್ನು ಪರಿಗಣಿಸಿಯೇ ವರದಿ ನೀಡಿರುತ್ತಾರಾ ಎಂದರೆ ಸಾಕ್ಷಿಯು ನಾನು ಪರಿಶೀಲನೆ ಮಾಡಿರುವುದಿಲ್ಲ, ತಂಡದವರೇ ಪರಿಶೀಲನೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

ನಾನು ನಮ್ಮ ತಂಡದವರಿಗೆ ಯಾವ ಯಾವ ದಾಖಲಾತಿಗಳನ್ನು ನೀಡಿ ಯಾವ ರೀತಿಯಾಗಿ ಪರಿಶೀಲನೆ ಮಾಡಬೇಕೆಂದು ನಿರ್ದೇಶನ ನೀಡಿರುವ ಪ್ರತಿಗಳನ್ನು ನ್ಯಾಯಲಯಕ್ಕೆ ನೀಡಿರುತ್ತೇನೆಯೋ ಅಥವಾ ತನಿಖಾದಿಕಾರಿಗಳಿಗೆ ನೀಡಿರುತ್ತೇನೆಯೋ ಎಂದು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ.

ಆರ್.ಐ. ವರದಿ, ಗ್ರಾಮ ಲೆಕ್ಕಿಗರ ವರದಿ ಮತ್ತು ಮಾಸಾಶನದ ಆದೇಶದ ಪ್ರತಿ ಮತ್ತು ಮಾಸಾಶನಕ್ಕೆ ಸಲ್ಲಿಸಿದ ಅರ್ಜಿಗಳನ್ನು ಪರಿಶೀಲಿಸದೇ ಮಾಸಾಶನವನ್ನು ಅರ್ಹ ಫಲಾನುಭವಿಗೆ ಆದೇಶ ಮಾಡಿರುತ್ತಾರೆ ಎಂದು ಹೇಳಲು ಬರುವುದಿಲ್ಲ ಎಂದರೆ ಸರಿ. ನಮ್ಮ ತಂಡ ಕೊಟ್ಟ ವರದಿಯಲ್ಲಿ ನಮ್ಮ ತಂಡದವರು ಆರ್.ಐ. ವರದಿ, ಗ್ರಾಮ ಲೆಕ್ಕಿಗರ ವರದಿ ಮತ್ತು ಮಾಸಾಶನಕ್ಕೆ ಸಲ್ಲಿಸಿದ ಅರ್ಜಿಯನ್ನು ಪರಿಶೀಲನೆ ಮಾಡಿ ವರದಿಯಲ್ಲಿ ಉಲ್ಲೇಖ ಮಾಡಿರುವುದಿಲ್ಲ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ನಮ್ಮ ತಂಡಗಳು ಸರಿಯಾಗಿ ಪರಿಶೀಲನೆ ಮಾಡದೇ ಖೊಟ್ಟಿಯಾಗಿ ಆರೋಪಿ ನಂ.೨ ರವರ ಮೇಲಿರುವ ಸಿಟ್ಟಿನಿಂದ ಅವರಿಗೆ ಸಂಬಂಧಿಸಿದ ಖೊಟ್ಟಿ ವರದಿ ಮಾತ್ರ ಸಲ್ಲಿಸಿರುತ್ತಾರೆ ಎಂದರೆ ಸರಿ ಅಲ್ಲ. ಸರಕಾರದ ಆದೇಶ ಮತ್ತು ನಿಯಮಾವಳಿಗಳನ್ನು ಉಲ್ಲಂಘಿಸಿದ್ದರೂ ನಾನು ನೇಮಿಸಿದ ತಂಡದವರು ವರದಿ ಸಲ್ಲಿಸಿದದ್ದರೂ ಸಲ್ಲಿಸಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಥಂರೆ ಸರಿ ಅಲ್ಲ. ಆರೋಪಿ ನಂ.೨ ರವರು ಗ್ರಾಮ ಲೆಕ್ಕಿಗ ಮತ್ತು ಕಂದಾಯ ನಿರೀಕ್ಷಕರ ವರದಿ ಸಲ್ಲಿಸಿದ ಮೇಲೆ ಆದೇಶ ಮಾಡಿರುತ್ತಾರೆ ಎಂಥರೆ ಸರಿ ಅಲ್ಲ.

ಮರುವಿಚಾರಣೆ : ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.ಆಳಂದ